# ಆತ್ಮವಿಕಾಸ-
## ವಿದ್ಯಾರ್ಥಿಗಳಿಗೆ ಕಿವಿಮಾತು -೨

-ಸ್ವಾಮಿ ಪ್ರೇಮೇಶಾನಂದ

ಅನುವಾದ:
ಸ್ವಾಮಿ ಕರುಣಾಕರಾನಂದ

### ಮೂರನೆಯ ಪಾಠ

ವಿದ್ಯಾರ್ಥಿಗಳೆ,

ನೀವು ಇಲ್ಲಿಯವರೆಗೂ ನಿಮ್ಮ ಜೀವನವನ್ನು ರೂಪಿಸಲು ಆವಶ್ಯಕವಾದ ಜವಾಬ್ದಾರಿಯುತ ನಡವಳಿಕೆಯ ಕುರಿತಂತೆ ಎಚ್ಚರ ವಹಿಸಿದ್ದೀರಿ. ಜೀವನವನ್ನು ಸುಂದರವಾಗಿ ಅರಳಿಸಬಲ್ಲ ಹಾಗೂ ಎದುರಾಗುವ ಸಮಸ್ಯೆಗಳ ಕೂಲಂಕಷ ವಿಶ್ಲೇಷಣೆಯನ್ನು ಮಾಡಿ, ಪರಿಹಾರ ನೀಡಬಲ್ಲ ಮೂರು ಅಂಶಗಳು ನಿಮ್ಮಲ್ಲಿ ಇರಲೇಬೇಕು.




ಮೊದಲನೆಯದು: ಸಾಗರದಂತೆ ಆಳವಾದ ಮತ್ತು ಆಗಸದಂತೆ ವ್ಯಾಪಕವಾದ ಸಹಾನುಭೂತಿಯನ್ನುಳ್ಳ ವಿಶಾಲ ಹೃದಯ ನಿಮ್ಮದಾಗಿರಬೇಕು. ಎರಡನೆಯದು: ಈ ಜಗತ್ತಿನ ಸುಖ-ದುಃಖ, ಒಳ್ಳೆಯದು-ಕೆಟ್ಟದ್ದು, ಎಲ್ಲ ಸಮಸ್ಯೆಗಳಿಗೂ ಸಮಾಧಾನ ನೀಡುವಂತಹ, ತನ್ನ ಆಕರ್ಷಣೆಗಳಿಂದ ಮನಸ್ಸನ್ನು ವಿಚಲಿತಗೊಳಿಸುವ ವಿಶ್ವವನ್ನು ಕೈಬಿಟ್ಟು ವಿಶ್ವನಾಥನ ಚರಣವನ್ನು ಮಾತ್ರ ಹಿಡಿಯುವಂಥ ಅತಿ ತೀಕ್ಷ್ಣವಾದ ಬುದ್ಧಿ. ಮೂರನೆಯದು: ಹೃದಯದ ಆಶಯಗಳನ್ನೂ, ಬುದ್ಧಿಯ ತೀಕ್ಷ್ಣತೆಯಿಂದ ಪರೀಕ್ಷಿಸಲ್ಪಟ್ಟ ಸಿದ್ಧಾಂತಗಳನ್ನೂ ಕಾರ್ಯಗತಗೊಳಿಸಲು ಹಾಗೂ ಅದಕ್ಕೆ ವಿರುದ್ಧವಾದ ಜಗತ್ತಿನ ಸಕಲ ಅಮಂಗಳಗಳನ್ನೂ ಶಕ್ತಿಯುತವಾಗಿ ಕುಟ್ಟಿ ಪುಡಿಮಾಡಲು ಸಾಮರ್ಥ್ಯವಿರುವಂತಹ, ವಜ್ರದಂತೆ ದೃಢವಾದ, ಕರ್ಮಪಟುವಾದ ನಿಡಿದೋಳುಗಳು.

ನೀವು ಈ ಮೂರು ಉಪಕರಣಗಳನ್ನು ಎಚ್ಚರಿಕೆಯಿಂದ, ಶ್ರದ್ಧೆಯಿಂದ ಸಂಗ್ರಹಿಸಿ, ಮನುಷ್ಯರಾಗಿ, ಎದ್ದು ನಿಲ್ಲಿ. ಜಗತ್ತಿನ ಇಷ್ಟೊಂದು ದುಃಖಗಳನ್ನು ಕಂಡೂ, ವಿವೇಚನೆಯಿಲ್ಲದೆ, ಓಂದಿನ ಜೀವನಶೈಲಿಯನ್ನೇ ಅನುಸರಿಸುವುದು ನಿಮಗೆ ಸರಿಹೋಗದು. ಮನುಷ್ಯನು ಕೇವಲ ಭವಿಷ್ಯತ್ತಿನ ಮೇಲೆ ಭರವಸೆಯನ್ನಿಟ್ಟುಕೊಂಡು ಅದೆಷ್ಟು ದುಃಖ, ಕಷ್ಟಗಳನ್ನು ಸಹಿಸಿಯೂ ಬದುಕುತ್ತಾನೆ! ನೀವುಗಳೇ ಆ ಭವಿಷ್ಯತ್ತಿನ ಭರವಸೆಯನ್ನು ಕಾರ್ಯಗತಗೊಳಿಸುವವರು.

ನೀವು ಭಾವಿಸಬಹುದು, ಈಗ ಹೇಳಿದಂತಹ ಮೂರು ಉಪಕರಣಗಳು ದೊರೆಯುವುದು ಅತಿ ದುರ್ಲಭ ಎಂದು. ಹಾಗೆ ನೋಡಿದರೆ ಜಗತ್ತಿನಲ್ಲಿ ಯಾವ ಒಳ್ಳೆಯ ವಸ್ತು ತಾನೆ ಸುಲಭವಾಗಿ ಸಿಗುತ್ತದೆ? ಪ್ರಯೋಜನಕಾರಿಯಾದ ಉಪಾಯವನ್ನು ಅವಲಂಬಿಸುವುದರೊಂದಿಗೆ ಸಾಹಸ ಮತ್ತು ದೃಢ ನಿಶ್ಚಯವೂ ಇದ್ದಲ್ಲಿ, ದುರ್ಲಭವೂ ಸುಲಭವಾಗುವುದೆಂಬುದನ್ನು ನಿಶ್ಚಯವಾಗಿ ತಿಳಿ. ಒಂದು ವೇಳೆ ಈ ಮೂರು ಅಂಶಗಳನ್ನು ಸಂಪಾದಿಸುವುದು ಅಸಾಧ್ಯವೇ ಆಗಿದ್ದಲ್ಲಿ, ನಿಮ್ಮನ್ನು ಈ ಆದರ್ಶ ಪಥದಲ್ಲಿ ನೂಕಿ, ನಿಮ್ಮ ಜೀವನವನ್ನು ಹಾಳು ಮಾಡಿಕೊಳ್ಳುವಂತೆ ನಾವು ಏಕೆ ತಾನೇ ಹೇಳುತ್ತಿದ್ದೆವು? ಸ್ವಲ್ಪ ಆಲೋಚಿಸಿ ನೋಡಿದರೆ ನಿಮಗೇ ತಿಳಿಯುತ್ತದೆ. ನಿಮಗೆ ಈಗ ಹೇಳಿರುವಂಥ ವಿಷಯಗಳನ್ನು ಪಾಲಿಸಿಕೊಂಡು ಬಂದರೆ ನಿಶ್ಚಯವಾಗಿಯೂ ನಿಮ್ಮ ಜೀವನ ಆದರ್ಶಮಯವಾಗುತ್ತದೆ.

### ಕೊನೆಯ ಪಾಠ

ವಿದ್ಯಾರ್ಥಿಗಳೆ, ಈಗ ಬಹಳ ದಿನಗಳವರೆಗೆ ಇಲ್ಲಿಯೇ ಇದ್ದುಕೊಂಡು, ನೀವು ನಿಮ್ಮ ಭವಿಷ್ಯ ಜೀವನದ ಅಡಿಪಾಯವನ್ನು ಹಾಕಿಕೊಳ್ಳಬೇಕಾಗಿದೆ. ಈಗ ಸದ್ಯಕ್ಕೆ ನಿಮಗಿದೇ ಮನೆ. ಇಂದಿನಿಂದ ನಿಮ್ಮ ಉನ್ನತಿ-ಅವನತಿಗಳನ್ನು, ಆಶ್ರಮದ ಮಂಗಳ-ಅಮಂಗಳಗಳನ್ನಾಗಿ ಪರಿಗಣಿಸಲಾಗುತ್ತದೆ.

ನಿಮ್ಮ ಜೀವನದ ಉದ್ದೇಶ ಹಾಗೂ ಅದನ್ನು ರೂಪಿಸುವುದಕ್ಕೆ ಬೇಕಾದ ನಿರ್ದಿಷ್ಟ ಉಪಾಯಗಳು ಮತ್ತು ಉಪಕರಣಗಳ ಕುರಿತಾಗಿ ನಾನು ತಿಳಿಸಿರುವ ವಿಚಾರಗಳನ್ನು ಆಗಲೇ ಕೇಳಿದ್ದೀರಿ. ಇವುಗಳಲ್ಲಿ ಕೆಲವಾದರೂ ನಿಯಮಗಳನ್ನು ಆಸಕ್ತಿ-ಉತ್ಸಾಹಗಳಿಂದ ಪಾಲಿಸುವಿರಾಗಿ ನಾನು ಭಾವಿಸುತ್ತೇನೆ. ಸ್ವಲ್ಪ ಸಮಯ ಈ ಮಾರ್ಗದಲ್ಲಿ ನಡೆದರೆ, ನೀವು ಮೊದಲನೆಯ ಪ್ರಯೋಜನವನ್ನು ಕಾಣುವಿರಿ— ನಿಮ್ಮ ಮನಸ್ಸಿನಲ್ಲಿ ತೃಪ್ತಿ, ಶಾಂತಿ, ಸದಾ ಆನಂದದ ಭಾವವು ಸ್ಫುರಿಸುತ್ತಿರುವುದನ್ನು ಅನುಭವಿಸುವಿರಿ.

ಎರಡನೆಯ ಪ್ರಯೋಜನವೆಂದರೆ— ಎಲ್ಲ ಕೆಲಸಗಳಲ್ಲೂ ಮನಸ್ಸು ದೃಢವಾಗಿ ನಿಲ್ಲುತ್ತದೆ, ತತ್ಫಲವಾಗಿ ಎಲ್ಲ ಕೆಲಸಗಳೂ ಸುಸೂತ್ರವಾಗುತ್ತವೆ. ಮೂರನೆಯ ಪ್ರಯೋಜನವೆಂದರೆ— ಆತ್ಮೋನ್ನತಿಗಾಗಿ ತೀವ್ರ ವ್ಯಾಕುಲತೆ ಹುಟ್ಟುತ್ತದೆ ಮತ್ತು ಶ್ರಮವೆನಿಸುವ ಕೆಲಸಗಳಲ್ಲಿ ಅನಾಸಕ್ತಿ ಅಥವಾ ಕಷ್ಟದ ಭಾವ ಆಗ ಇರುವುದೇ ಇಲ್ಲ. ನಾಲ್ಕನೆಯ ಪ್ರಯೋಜನವೆಂದರೆ— ಮನಸ್ಸು ಸರಳವಾಗುತ್ತದೆ. ಈರ್ಷ್ಯೆ, ದ್ವೇಷಗಳು ಇರುವುದಿಲ್ಲ. ಎಲ್ಲರೂ ನನ್ನವರೇ ಎಂಬ ಮನೋಭಾವವುಂಟಾಗುತ್ತದೆ ಮತ್ತು ನಿಮ್ಮನ್ನು ಪ್ರೀತಿಸದೆ ಇರಲು ಯಾರಿಗೂ ಸಾಧ್ಯವಾಗುವುದಿಲ್ಲ.

ನಿಯಮಬದ್ಧ ಜೀವನ ನಡೆಸುವುದರಿಂದ ನೀವು ಕ್ರಮೇಣ ಈ ಎಲ್ಲ ಅಮೋಘವಾದ ಪ್ರಯೋಜನಗಳನ್ನು ಸ್ವತಃ ಪಡೆದು, ಮುಂದೆ ಇನ್ನೂ ಉನ್ನತಿಗೇರಲು ಪ್ರೇರಣೆಯನ್ನು ಪಡೆಯುವಿರಿ. ನೀವು ಉನ್ನತಿಗೇರಿದರೆ, ನಿಮ್ಮ ಬಂಧುಮಿತ್ರರು, ನೆರೆಹೊರೆಯವರು ಅದೆಷ್ಟು ಆನಂದವನ್ನು ಪಡೆಯುವರೆಂಬುದನ್ನು ಪರಿಭಾವಿಸಿ ನೋಡಿ. ಇನ್ನು, ಇಂತಹ ಮಹತ್ತಾದ ಜೀವನವನ್ನು ನಿಮ್ಮದಾಗಿಸಿಕೊಂಡು, ಸಮಾಜದೆದುರು ನೀವು ನಿಲ್ಲಲು ಸಾಧ್ಯವಾದರೆ, ನಿಮಗೇ ಅದೆಷ್ಟು ಆನಂದ ಉಂಟಾಗುತ್ತದೆಂಬ ವಿಷಯವನ್ನು ಪ್ರತ್ಯೇಕವಾಗಿ ಹೇಳಬೇಕೇನು?

ಈ ಹೊಸ ಯುಗದ ಪ್ರಾರಂಭದಲ್ಲಿ, ಭಗವಾನ್ ಶ್ರೀರಾಮಕೃಷ್ಣರು ಮನುಕುಲದ ಮುಂದಿರಿಸಿರುವ ಉನ್ನತ ಜೀವನಾದರ್ಶವನ್ನು, ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿದರೆ, ಅವರ ಆಶೀರ್ವಾದವೂ ನಿಮ್ಮ ಮೇಲೆ ವರ್ಷಧಾರೆಯಂತೆ ಹರಿಯುತ್ತದೆ.

**ಈ ಆದರ್ಶವನ್ನು ಮನದಲ್ಲಿ ಧರಿಸಿ:**

ಜೀವನವನ್ನು ಅರಳಿಸುವುದೇ ಶಿಕ್ಷಣದ ಉದ್ದೇಶ.
ಎಲ್ಲ ಗುಣಗಳ ಅರಳುವಿಕೆ,
ಎಲ್ಲ ಮಾಧುರ್ಯಗಳ ಬೆಳಗುವಿಕೆಯೇ ಸಭ್ಯತೆ.

## ಎರಡನೆಯ ಭಾಗ

## ಸ್ವಾಮಿ ವಿವೇಕಾನಂದರ ವಾಣಿ

ನಿಮ್ಮ ಹೃದಯಾಂತರಾಳದಲ್ಲಿ ಸನಾತನ ಸಾಕ್ಷಿಯಾಗಿ ಒಬ್ಬ ನಿದ್ದಾನೆ. ನಮ್ಮ ದೇಶದ ಒಳಿತಿಗಾಗಿ, ನಮ್ಮ ರಾಷ್ಟ್ರದ ಪ್ರಗತಿಗಾಗಿ ಹಾಗೂ ಮನುಕುಲದ ಕಲ್ಯಾಣಕ್ಕಾಗಿ, ನಿಮ್ಮ ಹೃದಯಗಳನ್ನು ಅವನು, ಆ ರಾಮಕೃಷ್ಣ ಪರಮಹಂಸರು, ತೆರೆಯಲಿ. ಮುಂದೆ ಬರಲಿರುವ ಮಹಾಸಂಕ್ರಮಣವನ್ನು ಎದುರಿಸುವ ಸಲುವಾಗಿ ನಿಮ್ಮನ್ನು ಕೆಲಸದಲ್ಲಿ ನಿಷ್ಠೆಯುಳ್ಳವರನ್ನಾಗಿಯೂ, ದೃಢಮತಿಗಳನ್ನಾಗಿಯೂ ಮಾಡಲಿ.

ಏಳಿ, ಎಚ್ಚರಗೊಳ್ಳಿ. ಕಾರಣ, ನಿಮ್ಮ ಮಾತೃಭೂಮಿಯು ನಿಮ್ಮಿಂದ ಈ ತ್ಯಾಗವನ್ನು ಬಯಸುತ್ತಿದೆ. ಯುವಕರಿಂದ ಮಾತ್ರ ಈ ಕಾರ್ಯವು ಸಾಧ್ಯ. ಮತ್ತು ಇದೇ ರೀತಿ ನೂರಾರು–ಸಾವಿರಾರು ಯುವಕರು ಬೇಕಿದ್ದಾರೆ. ನೀವು ನನ್ನ ಕುರಿತು ಹೇಳಿದಿರಿ, ನಾನು ಒಂದಿಷ್ಟು ಕೆಲಸವನ್ನು ಸಾಧಿಸಿರುವೆನೆಂದು. ಅದು ಹೌದಾದಲ್ಲಿ, ನೀವು ಇದನ್ನೂ ನೆನಪಿನಲ್ಲಿಡಿ. ಏನೆಂದರೆ, ಒಂದು ಸಮಯದಲ್ಲಿ ನಾನೂ ಒಬ್ಬ ಯಃಕಶ್ಚಿತ್ ಹುಡುಗನಾಗಿದ್ದೆ– ನಾನೂ ಒಂದಾನೊಂದು ಸಮಯದಲ್ಲಿ ಇದೇ ಕೊಲ್ಕತಾದ ಬೀದಿಗಳಲ್ಲಿ ನಿಮ್ಮಂತೆಯೆ ಆಡಿಕೊಂಡಿದ್ದೆ. ಒಂದು ವೇಳೆ ನಾನೇ ಇಷ್ಟೊಂದು ಸಾಧಿಸಿರುವೆನೆಂದರೆ, ಇನ್ನು ನೀವುಗಳು ನನಗಿಂತಲೂ ಅದೆಷ್ಟು ಹೆಚ್ಚು ಸಾಧಿಸಬಲ್ಲಿರಿ! ಏಳಿ–ಎಚ್ಚರಗೊಳ್ಳಿ, ಜಗತ್ತು ನಿಮಗೆ ಆಹ್ವಾನವೀಯುತ್ತಿದೆ.

ನೀವು ದರಿದ್ರರೆಂದೂ, ನಿಮಗೆ ಯಾರೂ ಜೊತೆಯಿಲ್ಲ ಎಂದೂ ಭಾವಿಸದಿರಿ. ಏನು, ಎಲ್ಲಾದರೂ ಹಣದಿಂದ ಮನುಷ್ಯರಾಗುವುದನ್ನು ನೋಡಿರುವಿರಾ? ಬಹಳ ಕಾಲದಿಂದಲೂ ಮನುಷ್ಯನೇ ಹಣವನ್ನು ತಯಾರಿಸುತ್ತಿದ್ದಾನೆ. ಜಗತ್ತಿನಲ್ಲಿ ಏನೋ ಒಂದಿಷ್ಟು ಉನ್ನತಿಯಾಗಿದ್ದರೆ, ಅದೆಲ್ಲವೂ ಮಾನವನ ಶಕ್ತಿಯಿಂದಲೇ, ಅವನ ಉತ್ಸಾಹದ ಶಕ್ತಿಯಿಂದಲೇ, ವಿಶ್ವಾಸದ ಶಕ್ತಿಯಿಂದಲೇ ಆಗಿರುತ್ತದೆ.

ನಮಗೆ ಬೇಕಾಗಿರುವುದು ಶ್ರದ್ಧೆ. ದೌರ್ಭಾಗ್ಯವೆಂದರೆ ಭಾರತದಿಂದ ಇದು ಹೆಚ್ಚು–ಕಡಿಮೆ ಕಣ್ಮರೆಯೇ ಆಗಿದೆ ಮತ್ತು ಆ ಕಾರಣದಿಂದಲೇ ನಮ್ಮ ಈಗಿನ ದುರ್ದಶೆ. ಮನುಷ್ಯ ಮನುಷ್ಯರಲ್ಲಿ ವ್ಯತ್ಯಾಸವಿರುವುದು ಈ ಶ್ರದ್ಧೆಯ ತಾರತಮ್ಯದಿಂದಲ್ಲದೆ ಬೇರಾವುದರಿಂದಲೂ ಅಲ್ಲ. ಒಬ್ಬ ಮಾನವನನ್ನು ದೊಡ್ಡವನನ್ನಾಗಿಯೂ ಮತ್ತು ಇನ್ನೊಬ್ಬನನ್ನು ದುರ್ಬಲನನ್ನಾಗಿಯೂ, ಸಣ್ಣವನನ್ನಾಗಿಯೂ ಮಾಡುವುದೇ ಈ ಶ್ರದ್ಧೆ.........ಅಂತಹ ಶ್ರದ್ಧೆಯು ನಿಮ್ಮನ್ನು ಪ್ರವೇಶಿಸಲಿ.

ಎಲ್ಲವನ್ನೂ ಲೇವಡಿ ಮಾಡುತ್ತ, ಗಾಂಭೀರ್ಯವನ್ನು ಕಳೆದುಕೊಳ್ಳುವುದು – ನಮ್ಮ ರಾಷ್ಟ್ರದ ರಕ್ತದಲ್ಲಿ ನಿಧಾನವಾಗಿ ಸೇರಿಕೊಳ್ಳುತ್ತಿರುವ ಈ ಭಯಂಕರ ವ್ಯಾಧಿಯನ್ನು ಕಿತ್ತೊಗೆಯಿರಿ. ಅದನ್ನು ಬಿಟ್ಟು ಶಕ್ತಿಶಾಲಿಗಳಾಗಿ ಮತ್ತು ಮೇಲೆ ಹೇಳಿದಂತೆ ಶ್ರದ್ಧೆಯನ್ನು ಹೊಂದಿರಿ; ಮತ್ತೆಲ್ಲವೂ ಆಗ ಹಿಂಬಾಲಿಸಿಕೊಂಡು ಬರಲೇಬೇಕು.

ಹೆದರದಿರಿ, ಏಕೆಂದರೆ ಮನುಕುಲದ ಇತಿಹಾಸದುದ್ದಕ್ಕೂ ಎಲ್ಲ ಮಹತ್‌ಶಕ್ತಿಯೂ ಜನಸಾಮಾನ್ಯರಲ್ಲಿತ್ತು. ಜಗತ್ತಿನ ಮಹಾನ್ ಪ್ರತಿಭಾನ್ವಿತರೆಲ್ಲ ಅಂತಹ ಸಾಮಾನ್ಯರಿಂದಲೇ ಹೊರಬಂದವರು ಮತ್ತು ಇತಿಹಾಸವು ತಾನೇ ಪುನರಾವರ್ತನಗೊಳ್ಳುತ್ತದೆ. ಯಾವುದಕ್ಕೂ ಹೆದರದಿರಿ. ನೀವು ಅದ್ಭುತ ಕಾರ್ಯವನ್ನು ಮಾಡುವಿರಿ..........ಜಗತ್ತಿನ ದುಃಖಕ್ಕೆ ಭಯವೊಂದೇ ದೊಡ್ಡ ಕಾರಣ. ಭಯವೇ ಎಲ್ಲ ಮೂಢ ನಂಬಿಕೆಗಳಿಗಿಂತ ದೊಡ್ಡ ಮೂಢನಂಬಿಕೆ. ನಮ್ಮೆಲ್ಲ ಕಷ್ಟಗಳಿಗೆ ಭಯವೇ ದೊಡ್ಡ ಕಾರಣ ಮತ್ತು ನಿರ್ಭೀತಿಯೆ ಈ ಕ್ಷಣದಲ್ಲಿ ನಮಗೆ ಸ್ವರ್ಗವನ್ನು ತಂದುಕೊಡಬಲ್ಲದು. ಆದ್ದರಿಂದ, "ಏಳಿ, ಎಚ್ಚರಗೊಳ್ಳಿ ಮತ್ತು ಗುರಿಮುಟ್ಟುವವರೆಗೂ ನಿಲ್ಲದಿರಿ."

ಶಿಕ್ಷಕರಿಗೆ ಹಾಗೂ ಪೋಷಕರಿಗೆ:

ಒಂದು ಮಗುವಿಗೆ ಶಿಕ್ಷಣ ನೀಡಲು ನೀವು ಮಾಡುವ ಪ್ರಯತ್ನವು, ಒಂದು ಗಿಡವನ್ನು ಬೆಳೆಸಲು ಮಾಡುವ ಪ್ರಯತ್ನಕ್ಕಿಂತೇನೂ ಭಿನ್ನವಲ್ಲ. ನೀವೇನಾದರೂ ಮಾಡುವುದಿದ್ದರೆ ಅದು ಋಣಾತ್ಮಕವಾಗಿ ಮಾತ್ರ –ನೀವು ಕೇವಲ ಸಹಾಯ ಮಾಡಬಲ್ಲಿರಿ, ಅಷ್ಟೆ. ಅದು ಕೇವಲ ವ್ಯಕ್ತವಾಗುತ್ತದಷ್ಟೆ; ಅದು ತನ್ನ ಸ್ವಂತ ಪ್ರಕೃತಿಯನ್ನು ವಿಕಾಸ ಮಾಡಿಕೊಳ್ಳುತ್ತದೆ – ನೀವು ಕೇವಲ ಅಡಚಣೆಗಳನ್ನು ಸರಿಸಬಹುದಷ್ಟೆ

ವಿದ್ಯಾರ್ಥಿಗಳನ್ನು ಕುರಿತು:

ನೀವು ಒಳಗಿನಿಂದ ಹೊರಕ್ಕೆ ಬೆಳೆಯಬೇಕಾಗಿದೆ. ಯಾರೂ ನಿಮಗೆ ಶಿಕ್ಷಣ ನೀಡಲಾರರು, ಯಾರೂ ನಿಮ್ಮನ್ನು ಆಧ್ಯಾತ್ಮಿಕ ವ್ಯಕ್ತಿಗಳನ್ನಾಗಿ ಮಾಡಲಾರರು. ನಿಮ್ಮ ಆತ್ಮವನ್ನು ಹೊರತುಪಡಿಸಿ ಬೇರಾರೂ ನಿಮ್ಮ ಶಿಕ್ಷಕರಾಗಲು ಸಾಧ್ಯವಿಲ್ಲ. ಯಾರ ಹೃದಯವೆಂಬ ಪುಸ್ತಕವು ತೆರೆದಿದೆಯೊ ಅವರಿಗೆ ಇನ್ನಾವ ಪುಸ್ತಕಗಳ ಅವಶ್ಯಕತೆಯೂ ಇರುವುದಿಲ್ಲ. ಅವುಗಳ ಒಂದೇ ಒಂದು ಮೌಲ್ಯವೆಂದರೆ ನಮ್ಮಲ್ಲಿ ಆಸಕ್ತಿಯನ್ನು ಕೆರಳಿಸುವುದು ಅಷ್ಟೆ. ಪುಸ್ತಕಗಳು ಕೇವಲ ಇತರರ ಅನುಭವಗಳು.

## ಮೊದಲ ಪಾಠ

ವಿದ್ಯಾರ್ಥಿಗಳೆ,

ನಿಮ್ಮ ವಿಶ್ವವಿದ್ಯಾನಿಲಯದಲ್ಲಿನ ಓದು ಒಂದು ದಿನ ಪೂರ್ಣವಾಗುತ್ತದೆ. ಆಗ ನೀವು ಹಲವು ರೀತಿಯ ಜವಾಬ್ದಾರಿ ಯುತ ಕೆಲಸಗಳನ್ನು ಮಾಡಬೇಕಾಗುತ್ತದೆ. ಈಗ ನೀವು ವಿದೇಶೀಯರ ಕೈಗೊಂಬೆಗಳಲ್ಲ. ಈಗ ನೀವು ಸ್ವತಂತ್ರ ಭಾರತದ ಸ್ವತಂತ್ರ ಮಾನವರು. ಈಗ ನೀವು (೧) ನಿಮ್ಮ ಸ್ವಂತ ಹಿತ, (೨) ಭಾರತದ ಹಿತ, ಹಾಗೂ (೩) ಸಮಸ್ತ ಮಾನವಜಾತಿಯ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ನಡೆಯಬೇಕಾಗುತ್ತದೆ. ಆದ್ದರಿಂದಲೇ, ಇಂದಿನಿಂದ ಈ ನವಯುಗದ ಹೊಸ ಜೀವನಕ್ಕೆ ಉಪಯೋಗವಾಗುವಂತಹ ವಿದ್ಯಾಭ್ಯಾಸವು ನಿಮಗೆ ಅವಶ್ಯವಾಗಿ ಬೇಕಾಗಿದೆ.

### ಯಾವುದು ಶಿಕ್ಷಣ?

ಯಾವುದನ್ನು ಕಲಿತರೆ ಇಡೀ ಜೀವನವೆ ಸುಖಮಯ ವಾಗುವುದೊ ಅದೇ ಶಿಕ್ಷಣ. ಬಾಲ್ಯದ ಆನಂದವು ಯೌವನದಲ್ಲಿ, ಯೌವನದ ಆನಂದವು ಪ್ರೌಢಾವಸ್ಥೆಯಲ್ಲಿ ಹಾಗೂ ಪ್ರೌಢಾವಸ್ಥೆಯ ಸುಖವು ವೃದ್ಧಾಪ್ಯದಲ್ಲಿ ದುಃಖವಾಗಿ ಪರಿಣಮಿಸದೆ, ಉಳಿದರೆ, ಅದೇ ಶಿಕ್ಷಣ. ಯಾವ ಶಿಕ್ಷಣದಿಂದ, ಒಬ್ಬ ವ್ಯಕ್ತಿಯು ಸುಖಿಯಾದಾಗ ಸಮಗ್ರ ಸಮಾಜವು ಸುಖಿಯಾಗುತ್ತದೊ ಹಾಗೆಯೇ, ಒಂದು ಸಮಾಜದ ಸುಖವು ಮತ್ತೊಂದು ಸಮಾಜದ ಸುಖಕ್ಕೆ ಅಡಚಣೆಯಾಗದಿದ್ದರೆ, ಅದೇ ನಿಜವಾದ ಶಿಕ್ಷಣ.

ಯಾವುದು ದುಃಖವನ್ನು ದೂರಗೊಳಿಸಿ ಸುಖವನ್ನು ಹೆಚ್ಚಿಸುವುದೊ ಮತ್ತು ಗಳಿಸಿದ ಸುಖವನ್ನು ಸ್ಥಾಯಿಯಾಗಿ ಮಾಡಬಲ್ಲುದೊ, ಅದೇ ಶಿಕ್ಷಣ. ಯಾವುದರಿಂದ ಮನುಷ್ಯನ ಅಂತರಂಗದ ಪೂರ್ಣತೆಯು ವಿಕಸಿತಗೊಳ್ಳುವುದೊ, ಅದೇ ಶಿಕ್ಷಣವೆಂದು ಆಚಾರ್ಯರಾದ ಸ್ವಾಮಿ ವಿವೇಕಾನಂದರು ಹೇಳಿರುವರು.

### ಯಾವುದು ಶಿಕ್ಷಣವಲ್ಲ?

ಕೇವಲ ಜೀವನ ಸಾಗಿಸಲು ಬೇಕಾದ ಅರ್ಥಸಂಪಾದನೆಗಾಗಿ ಕೈಗೊಳ್ಳುವ ಶಿಕ್ಷಣ ನಿಜವಾದ ಶಿಕ್ಷಣದ ಒಂದು ಅಂಶ ಮಾತ್ರ.

ಬುದ್ಧಿಯ ವಿಕಾಸಕ್ಕಾಗಿ ವಿಜ್ಞಾನ–ದರ್ಶನ–ಧರ್ಮಶಾಸ್ತ್ರ–ಸಾಹಿತ್ಯ–ಸಂಗೀತ–ಶಿಲ್ಪವೇ ಮೊದಲಾದ ವಿಷಯಗಳ ಜ್ಞಾನವು ಆವಶ್ಯಕವೇನೊ ನಿಜ. ಆದರೆ, ಶಿಕ್ಷಣದ ಮುಖ್ಯ ಉದ್ದೇಶ–ಚಾರಿತ್ರ್ಯನಿರ್ಮಾಣ ಅಥವಾ ಮನುಷ್ಯತ್ವದ ವಿಕಾಸವನ್ನು ಸಾಧಿಸುವುದು. ಚಾರಿತ್ರ್ಯ ಉತ್ತಮವಾಗದಿದ್ದರೆ, ಸತ್ಪುರುಷನನ್ನಾಗಿ ಮಾಡದಿದ್ದರೆ ಎಲ್ಲ ಶಿಕ್ಷಣವೂ ವ್ಯರ್ಥವಾದಂತೆಯೆ. ಚಾರಿತ್ರ್ಯ ಹೀನ ವ್ಯಕ್ತಿಯ ಜೀವನ, ಆತ ಅದೆಷ್ಟೆ ಓದು–ಬರೆಹ ಬಲ್ಲವನಾಗಿದ್ದರೂ, ಆತನಿಗೇ ಆಗಲಿ ಅಥವಾ ಸಮಾಜಕ್ಕೇ ಆಗಲಿ ಅದು ಮಂಗಳವನ್ನುಂಟುಮಾಡದು.

ಕಳೆದ ಕೆಲವು ನೂರು ವರ್ಷಗಳಿಂದ ಮಾನವನ ಬುದ್ಧಿಮತ್ತೆಯಲ್ಲಿ ಬಹಳ ಪ್ರಗತಿ ಆಗಿರುವುದು ಹೌದಾದರೂ, ತನ್ನ ಒಳಿತನ್ನು ಹೇಗೆ ಸಾಧಿಸಬಹುದೆಂದು, ಮನುಷ್ಯ ಇಂದಿಗೂ ಅರ್ಥಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಆದ್ದರಿಂದಲೇ ಆಧುನಿಕ ಶಿಕ್ಷಣ ಗಳಿಸಿರುವ ಮಾನವನೇ ತನ್ನ ಸ್ವಾರ್ಥಪರತೆಯಿಂದ, ದೂರದರ್ಶಿತ್ವ ಇಲ್ಲದಿರುವಿಕೆಯಿಂದ ಹಾಗೂ ಹಿಂಸೆಯಿಂದ ಅನೇಕ ವೇಳೆ ತನ್ನ ಮೃತ್ಯುವನ್ನು ತಾನೇ ಕೂಗಿ ಕರೆದಿದ್ದಾನೆ. ಲಂಗು–ಲಗಾಮಿಲ್ಲದ ಸ್ವದೇಶಪ್ರೇಮದಿಂದ ಹೇಗೆ ಪರದೇಶ ವಿದ್ವೇಷವು ಬೆಳೆಯುತ್ತದೆ. ವಿವೇಚನೆಯಿಲ್ಲದ ಸ್ವಮತಾನುರಾಗದಿಂದ ಹೇಗೆ ಪರಜಾತಿಗಳನ್ನು ದೋಚಲು ಪ್ರೇರಣೆಯುಂಟಾಗುತ್ತದೆ, ಸಾಧನೆಯೇ ಇಲ್ಲದ ಸ್ವಧರ್ಮಾನುರಾಗದಿಂದ ಪರಧರ್ಮಗಳ ಕುರಿತು ಹೇಗೆ ಅವಜ್ಞೆಯುಂಟಾಗುತ್ತದೆ ಎಂಬಿವೇ ಸರಳ ಸತ್ಯಗಳು ಹಿಂದೆ ಹೇಳಿದಂಥ ಶಿಕ್ಷಿತರೆನಿಸಿಕೊಂಡವರಿಗೆ ತಿಳಿದಿರಲು ಸಾಧ್ಯವಿಲ್ಲ. ಯಾವ ಶಿಕ್ಷಣವು ಮನುಷ್ಯನನ್ನು ಹೀಗೆ ಅಂಧನನ್ನಾಗಿ ಮಾಡುವುದೊ, ಅದು ನಿಶ್ಚಯವಾಗಿಯೂ ಕುಶಿಕ್ಷಣ.

ಹಿಂದಿನ ಕಾಲದಿಂದಲೂ ಯುವಕರನ್ನು ಶಿಕ್ಷಿತರನ್ನಾಗಿಸಲು ವಿವಿಧ ವ್ಯವಸ್ಥೆಗಳು ಸಭ್ಯಸಮಾಜಗಳಲ್ಲಿ ಆಚರಣೆಯಲ್ಲಿವೆ. ಭಾರತದಲ್ಲಿ ಶಿಕ್ಷಣಸಂಸ್ಥೆಗೆ ಬ್ರಹ್ಮಚರ್ಯಾಶ್ರಮವೆಂಬ ಹೆಸರಿತ್ತು ಮತ್ತು ವಿದ್ಯಾರ್ಥಿಗಳನ್ನು ಬ್ರಹ್ಮಚಾರಿಗಳೆಂದು ಕರೆಯುತ್ತಿದ್ದರು. ಈಗಿನ ಯುದ್ಧವಿದ್ಯೆಯ ತರಬೇತಿಯಂತೆ(military training), ಬ್ರಹ್ಮಚರ್ಯ–ಶಿಕ್ಷಣ ವಿಧಾನವೂ ಬಹಳ ಶಿಸ್ತಿನದಾಗಿತ್ತು. ತತ್ಪರಿಣಾಮ ವಿದ್ಯಾರ್ಥಿಗಳ ಚಾರಿತ್ರ್ಯದಲ್ಲಿ ಮಹತ್ತ್ವವು ಅರಳಿ ನಿಲ್ಲುತ್ತಿತ್ತು, ಹಾಗೆಯೇ, ಸಮಾಜವು ಅವರ ಮುಂದಾಳುತ್ವವನ್ನು ತಲೆ ಬಗ್ಗಿಸಿ ಸ್ವೀಕರಿಸುತ್ತಿತ್ತು. ಪೂರ್ವಕಾಲದಿಂದಲೂ ದಾಳಿಬಂದ ಅತಿ ಕ್ರೂರರೂ, ಅಸಭ್ಯರೂ ಹಾಗೂ ಅರೆಸಭ್ಯರೂ ಆದ ಬೇರೆಬೇರೆ ಜನಾಂಗದವರ ಉಪಟಳವನ್ನು ಸಹಿಸಿಯೂ, ಜೀವನದಲ್ಲಿ ನಿರಾಸೆಯನ್ನು ತಾಳದೆ ಇಂದಿಗೂ ಈ ಭಾರತವು ಬದುಕಿಕೊಂಡಿದೆಯೆಂದರೆ ಇದಕ್ಕೆ ಅಂತಹ ಶಿಕ್ಷಣದ ವ್ಯವಸ್ಥೆಯಿದ್ದದ್ದೇ ಕಾರಣ.

ಒಳ್ಳೆಯ ಶಿಕ್ಷಣದ ಸಹಾಯದಿಂದ ಮತ್ತೊಮ್ಮೆ ಭಾರತವು ತನ್ನ ಹಿಂದಿನ ಗೌರವದ ನೆಲೆಯನ್ನು ಕಂಡುಕೊಳ್ಳುವಂತೆ ಮಾಡುವ ಜವಾಬ್ದಾರಿಯು ಈಗ ನಿಮ್ಮ ಮೇಲೆ ಬಿದ್ದಿದೆ. ಯಾವ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ, ತಾನು ಬೆಳೆಯಲು ಬೇಕಾದ ಎಲ್ಲ ರೀತಿಯ ಸೌಲಭ್ಯಗಳನ್ನೂ ಪಡೆಯುತ್ತಾನೊ, ಆ ಸಮಾಜವೇ ನಿಜವಾಗಿಯೂ ಅಭಿವೃದ್ಧಿಯನ್ನು ಹೊಂದಿರುತ್ತದೆ. ಸಮಾಜದ ಒಂದು ಅಂಶವನ್ನು ಕೆಳಗೆ ಹೊಸಕಿ ಹಾಕಿ ಇನ್ನೊಂದು ಅಂಶವನ್ನು ಅಭಿವೃದ್ಧಿಗೊಳಿಸುವುದು ಇನ್ನು ಮುಂದೆ ಸಾಧ್ಯವಾಗದು; ಈಗ ಎಲ್ಲರಿಗೂ ಸಮಾನವಾದ ಅಧಿಕಾರವನ್ನು ನೀಡಬೇಕು.

ವಿದ್ಯಾರ್ಥಿಗಳೆ, ನೀವೆಲ್ಲರೂ ಆತ್ಮೋನ್ನತಿಯ ಸಂಬಂಧವಾಗಿ ಎಚ್ಚೆತ್ತುಕೊಳ್ಳಿ ಹಾಗೂ ಭಾರತದ ಎಲ್ಲ ಜನರನ್ನೂ ಒಟ್ಟಿಗೆ ಅಭಿವೃದ್ಧಿಶೀಲರನ್ನಾಗಿ ಮಾಡುವ ಮಹಾವ್ರತವನ್ನು ಕೈಗೊಂಡು ಧನ್ಯರಾಗಿ.

(ಮುಂದುವರಿಯುವುದು)